## ಕರ್ನಾಟಕ ಸರ್ಕಾರ

ಸಂಖ್ಯೆ: ಪಿಡಬ್ಲ್ಯೂಡಿ 230 ಸಿಆರ್‌ಎಂ 06

ಕರ್ನಾಟಕ ಸರ್ಕಾರದ ಸಚಿವಾಲಯ
ವಿಕಾಸ ಸೌಧ, 3ನೇ ಮಹಡಿ
ಬೆಂಗಳೂರು, ದಿನಾಂಕ:14-08-2006

## ಸುತ್ತೋಲೆ

ವಿಷಯ : ಕಾಮಗಾರಿಗಳ ಗುತ್ತಿಗೆ ಅನುಮೋದನೆ ಬಗ್ಗೆ.

ಉಲ್ಲೇಖ : ಆರ್ಥಿಕ ಇಲಾಖೆಯ ಸುತ್ತೋಲೆ ಸಂಖ್ಯೆ ಪಿಡಬ್ಲ್ಯೂಡಿ 1359/ಎಸ್‌ಒ/ ಎಫ್‌ಸಿ 2001(ಭಾ-2) ದಿನಾಂಕ 3-12-2002.

- - -

ಇಲಾಖೆಯು ಕೈಗೊಳ್ಳುತ್ತಿರುವ ಕಾಮಗಾರಿಗಳಿಗೆ ಗುತ್ತಿಗೆ ನಿಗದಿಪಡಿಸುವಾಗ "ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ-2000" ಅಧಿನಿಯಮದನ್ವಯ ಕಟ್ಟುನಿಟ್ಟು ಕ್ರಮ ಜರುಗಿಸುವುದು ಅವಶ್ಯವಿರುತ್ತದೆ. ಇತ್ತೀಚೆಗೆ ಮಾರುಕಟ್ಟೆಯಲ್ಲಿ ನಿರ್ಮಾಣ ಸಾಮಗ್ರಿಗಳಾದ ಸಿಮೆಂಟು, ಉಕ್ಕು, ಡಾಂಬರು, ಮರಳು ಇತ್ಯಾದಿಗಳ ಬೆಲೆಯಲ್ಲಿ ಬಹಳಷ್ಟು ಹೆಚ್ಚುವರಿ ಆಗಿರುವುದರಿಂದ ಇಲಾಖೆಯ ಕಾಮಗಾರಿಗಳ ಗುತ್ತಿಗೆಗಳಲ್ಲಿ ಬಹಳಷ್ಟು ಹೆಚ್ಚಿನ ದರಗಳನ್ನು ಗುತ್ತಿಗೆದಾರರು ನಮೂದಿಸುತ್ತಿದ್ದು ಇದರಿಂದಾಗಿ ಅನೇಕ ಗುತ್ತಿಗೆ ಪ್ರಸ್ತಾವನೆಗಳನ್ನು ಸರ್ಕಾರದ ಅನುಮೋದನೆಗೆ ಸಲ್ಲಿಸಲಾಗುತ್ತಿದೆ. ವಿವಿಧ ವಲಯಗಳಿಂದ ಸರ್ಕಾರಕ್ಕೆ ಸಲ್ಲಿಸಲಾಗುತ್ತಿರುವ ಗುತ್ತಿಗೆ ದಾಖಲೆಗಳನ್ನು ಪರಿಶೀಲಿಸಿದಾಗ ಕೆಳಕಂಡ ಅಂಶಗಳನ್ನು ಗಮನಿಸಲಾಗಿದೆ.

1. ಮೊದಲನೆ ಕರೆಗೆ ಏಕೈಕ ಗುತ್ತಿಗೆ ಸ್ವೀಕೃತವಾಗಿದ್ದಲ್ಲಿ ಅಂತಹ ಗುತ್ತಿಗೆಯನ್ನು ತಿರಸ್ಕರಿಸಿ ಮರುಗುತ್ತಿಗೆ ಕರೆಯಲು ಕ್ರಮ ಕೈಗೊಳ್ಳದೇ ಅನುಮೋದನೆಗೆ ಶಿಫಾರಸ್ಸು ಮಾಡಲಾಗುತ್ತಿದೆ. ಗುತ್ತಿಗೆಯ ಮೊದಲ ಹಾಗೂ ಎರಡನೇ ಕರೆಗೆ ಏಕೈಕ ಗುತ್ತಿಗೆಗಳು ಸ್ವೀಕೃತವಾದಲ್ಲಿ , ಅಂತಹ ಗುತ್ತಿಗೆಗಳನ್ನು ತಿರಸ್ಕರಿಸಿ ಮೂರನೇ ಬಾರಿಗೆ ಗುತ್ತಿಗೆ ಕರೆಯಬೇಕಿದ್ದು ಮೂರನೇ ಗುತ್ತಿಗೆ ಕರೆಗೂ ಏಕೈಕ ಗುತ್ತಿಗೆಯೇ ಸ್ವೀಕೃತವಾಗಿ ಆರ್ಥಿಕ ಇಲಾಖೆಯ ದಿನಾಂಕ: 03.12.2002ರ ಸುತ್ತೋಲೆಯಲ್ಲಿ ಸೂಚಿಸಿರುವ ಪ್ರತಿಶತಗಳಿಗಿಂತ ಹೆಚ್ಚಿನದಾಗಿದ್ದಲ್ಲಿ ಅಂತಹ ಗುತ್ತಿಗೆದಾರರೊಡನೆ ಕಡ್ಡಾಯವಾಗಿ ಸಂಧಾನ ನಡೆಸಿ ಕಡಿಮೆ ಗುತ್ತಿಗೆ ದರಗಳನ್ನು ಪಡೆಯಲು ಪ್ರಯತ್ನ ಮಾಡಬೇಕಿದೆ. ಅನಿವಾರ್ಯ ಕಾರಣಗಳಿಂದಾಗಿ ಏಕೈಕ ಗುತ್ತಿಗೆ ಮಾತ್ರ ಸ್ವೀಕೃತವಾಗಿದ್ದು ಮರುಗುತ್ತಿಗೆ ಕರೆದರೂ ಹೆಚ್ಚಿಗೆ ಗುತ್ತಿಗೆದಾರರು ಭಾಗವಹಿಸುವ ಸಾಧ್ಯತೆ ಇಲ್ಲವಾದಲ್ಲಿ ಅದನ್ನು ಸ್ಪಷ್ಟವಾಗಿ ಪರಿಶೀಲಿಸಿ ಸೂಕ್ತ ಶಿಫಾರಸ್ಸಿನೊಂದಿಗೆ ಅನುಮೋದನಾ ಪ್ರಾಧಿಕಾರಕ್ಕೆ ಸಲ್ಲಿಸುವುದು ಹಾಗೂ ಅನುಮೋದನಾ ಪ್ರಾಧಿಕಾರವು ಈ ಸಂಬಂಧ ತಮ್ಮ ಸೂಕ್ತ ಅಭಿಪ್ರಾಯ ದಾಖಲಿಸಿ ಗುತ್ತಿಗೆಯನ್ನು ಅನುಮೋದಿಸಲು/ತಿರಸ್ಕರಿಸಲು ಕ್ರಮಕೈಗೊಳ್ಳುವುದು.

2. ಗುತ್ತಿಗೆಗಳನ್ನು 90 ದಿನಗಳ ಊರ್ಜಿತ ಅವಧಿಯೊಳಗೇ ಅನುಮೋದಿಸಲು ಕ್ರಮ ಜರುಗಿಸದೆ ಗುತ್ತಿಗೆದಾರರಿಂದ ವಿಸ್ತೃತ ಅವಧಿ ಪಡೆದು, ಗುತ್ತಿಗೆ ಸ್ವೀಕೃತವಾದ 4-5 ತಿಂಗಳ ವಿಳಂಬದ ನಂತರ ಗುತ್ತಿಗೆ ಊರ್ಜಿತ ಅವಧಿಯ ಮುಕ್ತಾಯದ ಹಂತದಲ್ಲಿ ಗುತ್ತಿಗೆಗಳನ್ನು ಅನುಮೋದನೆ ಪ್ರಾಧಿಕಾರಕ್ಕೆ ಸಲ್ಲಿಸುತ್ತಿರುವುದನ್ನು ಗಮನಿಸಲಾಗಿದೆ. ಇದರಿಂದಾಗಿ, ಗುತ್ತಿಗೆ ಪ್ರತಿಶತವು ಹೆಚ್ಚಿಗೆ ಇದ್ದಲ್ಲಿ ಗುತ್ತಿಗೆದಾರರನ್ನು ಸಂಧಾನಕ್ಕೆ ಆಹ್ವಾನಿಸಲು ಸಹ ಕಾಲಾವಕಾಶ ದೊರೆಯುತ್ತಿಲ್ಲ ಹಾಗೂ ಗುತ್ತಿಗೆ ಪರಿಶೀಲಿಸಲು ಸಾಕಷ್ಟು ಕಾಲಾವಕಾಶ ಲಭ್ಯವಿರುವುದಿಲ್ಲ. ಆದ್ದರಿಂದ ಗುತ್ತಿಗೆಗಳನ್ನು ಸ್ವೀಕರಿಸಿದ ನಂತರ ಅವುಗಳನ್ನು ಆದಷ್ಟು ಕಡಿಮೆ ಸಮಯದೊಳಗೆ ಪರಿಶೀಲಿಸಿ ಅನುಮೋದನಾ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು. ಯಾವ ಕಾರಣಕ್ಕೂ ವಿಳಂಬಕ್ಕೆ ಆಸ್ಪದಕೊಡದೇ ಅನುಮೋದನೆ ದೊರಕಿಸಿಕೊಂಡು ಗುತ್ತಿಗೆಯ ಮೂಲ ಊರ್ಜಿತ ಅವಧಿಯೊಳಗೆ (90ದಿನ) ಕಾರ್ಯಾದೇಶ ನೀಡಲು ಕ್ರಮಕೈಗೊಳ್ಳತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ವಿಳಂಬಕ್ಕೆ ಕಾರಣರಾದವರ ಮೇಲೆ ಶಿಸ್ತು ಕ್ರಮಕೈಗೊಳ್ಳುವುದಲ್ಲದೆ ಅದರಿಂದ ಉಂಟಾಗಬಹುದಾದ ಎಲ್ಲಾ ಆಗುಹೋಗುಗಳಿಗೆ ಅವರನ್ನೇ ಜವಾಬ್ದಾರರನ್ನಾಗಿ ಮಾಡಲಾಗುವುದು.

3. ಇದಲ್ಲದೆ, ಕೆಲವು ಗುತ್ತಿಗೆಗಳಲ್ಲಿ ಗುತ್ತಿಗೆದಾರರು ಸಲ್ಲಿಸಿರುವ ದರಗಳನ್ನು ಗುತ್ತಿಗೆ ತೆರೆದ ದಿನದಂದು ಚಾಲ್ತಿಯಲ್ಲಿದ್ದ ದರಪಟ್ಟಿಯ ದರಗಳಿಗೆ ಹೋಲಿಕೆ ಮಾಡಲಾಗುತ್ತಿದ್ದು, ಇದು ಸರಿಯಾದ ಕ್ರಮವಲ್ಲ. ಗುತ್ತಿಗೆ ಸ್ವೀಕೃತವಾದ ದಿನದಂದು ಚಾಲ್ತಿಯಲ್ಲಿರುವ ದರಪಟ್ಟಿಯ ದರಗಳಿಗೆ ಗುತ್ತಿಗೆ ದರಗಳನ್ನು ಹೋಲಿಕೆ ಮಾಡಬೇಕಿರುತ್ತದೆ.

4. ಗುತ್ತಿಗೆಗಳಿಗೆ ಅನುಮೋದನೆ ನೀಡುವಾಗ ಸರ್ಕಾರದ ಆದೇಶ ಸಂಖ್ಯೆ ಲೋಇ/1/ಎಫ್‌ಸಿಆರ್ 93, ದಿನಾಂಕ 15-12-1994ರಲ್ಲಿ ಇಲಾಖೆಯ ವಿವಿಧ ಅಧಿಕಾರಿಗಳಿಗೆ ನಿಗದಿಪಡಿಸಲಾಗಿರುವ ಆರ್ಥಿಕ ಪ್ರತ್ಯಾಯೋಜನೆಯ ಕ್ರಮ ಸಂಖ್ಯೆ 3(ಬಿ) ಯಲ್ಲಿ ನೀಡಿರುವ ಅಧಿಕಾರವನ್ನು ಮಾತ್ರ ಪರಿಗಣನೆಗೆ ತೆಗೆದುಕೊಳ್ಳುತ್ತಿರುವುದನ್ನು ಗಮನಿಸಲಾಗಿದೆ. ಸದರಿ ಆದೇಶದ ಕ್ರಮ ಸಂಖ್ಯೆ 2 (ಸಿ)ನಲ್ಲಿ ಪರಿಷ್ಕೃತ ಅಂದಾಜನ್ನು ಅನುಮೋದಿಸುವ ಬಗ್ಗೆ ನೀಡಿರುವ ಅಧಿಕಾರವನ್ನು ಮತ್ತು ಕ್ರಮಸಂಖ್ಯೆ 4 ರಲ್ಲಿ ಮೂಲ ಅಂದಾಜು ಮೊತ್ತದ ಮೇಲೆ ಹೆಚ್ಚುವರಿ ಅನುಮೋದಿಸುವ ಬಗ್ಗೆ ನೀಡಿರುವ ಅಧಿಕಾರವನ್ನು ಸಹ ಪರಿಗಣಿಸಿ ಗುತ್ತಿಗೆಗಳನ್ನು ಅಂಗೀಕರಿಸಲು ಕ್ರಮ ಕೈಗೊಳ್ಳುವುದು.

5. ಗುತ್ತಿಗೆಗಳನ್ನು ಅನುಮೋದನೆಗೆ ಸಲ್ಲಿಸುವಾಗ ಗುತ್ತಿಗೆ ಪ್ರಕ್ರಿಯೆಯ ಘಟನಾವಳಿಗಳ ಸಂಪೂರ್ಣ ವಿವರವನ್ನು ಮತ್ತು ಇನ್ನಿತರ ಅಗತ್ಯ ಮಾಹಿತಿಗಳನ್ನು ಗುತ್ತಿಗೆ ಜೊತೆಗೆ ಚೆಕ್ ಲಿಸ್ಟ್‌ನಲ್ಲಿ ಸಲ್ಲಿಸುವುದು. ಗುತ್ತಿಗೆ ಅನುಮೋದನಾ ಪ್ರಾಧಿಕಾರವು ಚೆಕ್‌ಲಿಸ್ಟ್‌ಅನ್ನು ತಪ್ಪದೇ ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳುವುದು.

6. ಗುತ್ತಿಗೆ ಕಡತಗಳನ್ನು ಮೇಲಧಿಕಾರಿಗಳಿಗೆ/ ಸರ್ಕಾರಕ್ಕೆ ಸಲ್ಲಿಸುವಾಗ ಕೆಳಹಂತದ ಅಧಿಕಾರಿಯು ಗುತ್ತಿಗೆ ಅನುಮೋದನೆ/ತಿರಸ್ಕರಿಸಲು ಅವಶ್ಯವಾಗಿ ಸೂಕ್ತ ಶಿಫಾರಸ್ಸಿನೊಂದಿಗೆ ಸಲ್ಲಿಸುವುದು.

ವಿವಿಧ ಕಛೇರಿಗಳಲ್ಲಿ ಕಾಮಗಾರಿಗಳ ಗುತ್ತಿಗೆಗೆ ಅನುಮೋದನೆ ನೀಡುವಾಗ ಹಾಗೂ ಗುತ್ತಿಗೆಗಳನ್ನು ಸರ್ಕಾರದ ಅನುಮೋದನೆಗೆ ಸಲ್ಲಿಸುವಾಗ ಈ ಅಂಶಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚಿಸಲಾಗಿದೆ. ತಪ್ಪಿದಲ್ಲಿ ಸಂಬಂಧಪಟ್ಟವರ ಮೇಲೆ ಶಿಸ್ತುಕ್ರಮ ಜರುಗಿಸಲಾಗುವುದು.

(ಟಿ. ಸುಕುಮಾರ್)
ಸರ್ಕಾರದ ಕಾರ್ಯದರ್ಶಿ
ಲೋಕೋಪಯೋಗಿ ಇಲಾಖೆ

ಇವರಿಗೆ:

1. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ದಕ್ಷಿಣ) ಬೆಂಗಳೂರು.
2. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡಗಳು (ಉತ್ತರ) ಧಾರವಾಡ.
3. ಮುಖ್ಯ ಇಂಜಿನಿಯರ್, ರಾಷ್ಟ್ರೀಯ ಹೆದ್ದಾರಿ ವಲಯ, ಬೆಂಗಳೂರು.
4. ಅಧೀಕ್ಷಕ ಇಂಜಿನಿಯರ್, ______________ ವೃತ್ತ, ______________
5. ಕಾರ್ಯಪಾಲಕ ಇಂಜಿನಿಯರ್, ___ ವಿಭಾಗ